ಓ.ಎಸ್. ನಂ. 84/2013
ಪಿ.ಡಬ್ಲ್ಯು: 01(Bosalingappa)

ದಿನಾಂಕ: 21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀಸವಾಲು: ಪ್ರತಿವಾದಿ ಪರ – ಶ್ರೀ KJG ವಕೀಲರಿಂದ.

ಸರ್ವೆ ನಂಬರ್ 210 ಸಿ ದಾಸರ ಓಬಯ್ಯನ 3 ಜನ ಮಕ್ಕಳ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಈಗ ಪಹಣಿ ಪತ್ರಿಕೆಯನ್ನು ನೋಡುತ್ತಿದ್ದು ಅದನ್ನು ಓದಲಾಗುವುದಿಲ್ಲ, ಏಕೆಂದರೆ ನನಗೆ ಸರಿಯಾಗಿ ಕಾಣುವುದಿಲ್ಲ. ನಾನು ಕಣ್ಣನ್ನು ಪರೀಕ್ಷಿಸಿರುವುದಿಲ್ಲ, ಆದ್ದರಿಂದ ಕಣ್ಣಡಕವನ್ನು ತಂದಿರುವುದಿಲ್ಲ. ನನಗೆ ಕಣ್ಣು ಕಾಣುತ್ತಿದ್ದರು ಸಹ ದಾಖಲಾತಿಗಳಲ್ಲಿರುವ ಅಂಶಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಕಾಣಿಸುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 184 ಜಿ ದಾಸರ ಓಬಯ್ಯನವರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮ ಗಂಡ ಬೋಸಯ್ಯ ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮ ನನ್ನ ಪತ್ನಿ ಎಂದರೆ ಸುಳ್ಳು.

ಸರ್ವೆ ನಂಬರ್ 181 ಜಿ/3 ನನ್ನ ಹೆಂಡತಿಯ ಹೆಸರಿಗೆ ಮಾಡಿಸಿರುತ್ತೇನೆ ಎಂದರೆ ಸುಳ್ಳು. ಸರ್ವೆ ನಂಬರ್ 163 ಎ, ಸರ್ವೆ ನಂಬರ್ 163 ಎಫ್, ಸರ್ವೆ ನಂಬರ್ 164 ಎ, ಸರ್ವೆ ನಂಬರ್ 164 ಬಿ, ಸರ್ವೆ ನಂಬರ್ 174 ಡಿ, ಸರ್ವೆ ನಂಬರ್ 181 ಜಿ/2, ಸರ್ವೆ ನಂಬರ್ 181 ಜಿ/4 ಇವೆಲ್ಲವು ಮೂಲತಃವಾಗಿ ನಾಯಕರ ಬೋರಯ್ಯನ ಆಸ್ತಿಗಳು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ನಾಯಕರ ದೊಡ್ಡ ಬೋರಯ್ಯ ಮೃತಪಟ್ಟ ನಂತರ ಅವರ ಹಿರಿಯ ಮಗ ಮುದ್ದಲ ಬೋರಯ್ಯರವರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಇವು 2 ನೇ ಪ್ರತಿವಾದಿಯ ಪೂರ್ವಜರ ಆಸ್ತಿಗಳು ಎಂದರೆ ಸುಳ್ಳು. ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ಇನ್ನುಳಿದ ಆಸ್ತಿಗಳು ಮುದ್ದಲ ಬೋರಯ್ಯನ ಹೆಸರಿಗೆ ಇವೆ ಎಂದರೆ ನನಗೆ ಗೊತ್ತಿಲ್ಲ. ನಾಯಕರ ದೊಡ್ಡ ಬೋರಯ್ಯ ಯಾವಾಗ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆತನ ಕಾಲದ ನಂತರ ಮುದ್ದಲ ಬೋರಯ್ಯ ಮನೆಯ ಯಜಮಾನಿಕೆ ಮಾಡುತ್ತಿದ್ದ ಎಂದರೆ ಸುಳ್ಳು. ಆ ಕಾರಣದಿಂದ 2 ನೇ ಪ್ರತಿವಾದಿಯ ಅಜ್ಜನಾದ ನಾಯಕರ ಬೋರಯ್ಯನ ಆಸ್ತಿಗಳು ಇಂದಿಗೂ ಮುದ್ದಲ ಬೋರಯ್ಯನ ಹೆಸರಿಗೆ ಇವೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಾವಾ ಆಸ್ತಿಗಳನ್ನು ಹೊರತುಪಡಿಸಿ ಇತರೇ ಒಟ್ಟು ಕುಟುಂಬದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಮುದ್ದಲ ಬೋರಯ್ಯ, ಕಾಡಲ ಬೋರಯ್ಯರವರ ಆಸ್ತಿ ಬೇರೆ ಇವೆ. ನಾಯಕರ ಬೋರಯ್ಯನ ಮಕ್ಕಳು ಈಗಲೂ ಸಹ ಆತನ ಆಸ್ತಿಗಳನ್ನು ಜಂಟಿ ಸ್ವಾಧೀನದಲ್ಲಿ ಹೊಂದಿದ್ದಾರೆ ಎಂದರೆ ಸುಳ್ಳು. ಓ ಎಸ್ ನಂಬರ್ 29/2007 ರ ತೀರ್ಪಿನಲ್ಲಿ ಗಮನಿಸಿರುವ ಅಂಶಗಳ ಆಧಾರದ ಮೇರೆಗೆ ಈ ದಾವೆಯನ್ನು

ಹೂಡಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ನಾನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸುಳ್ಳು. ಓ ಎಸ್ ನಂಬರ್ 29/2007 ನ್ನು ಓಬಯ್ಯ, ಬಂಗಾರಿ ಪಾಲಮ್ಮರವರ ವಿರುದ್ಧ ಹೂಡಿರುತ್ತೇವೆ. ಸದರಿ ದಾವೆಯನ್ನು ಇನ್ನು ಹಲವರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಾಡಲ ಓಬಯ್ಯನ ಮೊಮ್ಮಗಳಾದ ಗಂಗಮ್ಮಳನ್ನು ನನ್ನ ತಮ್ಮ ಮದುವೆಯಾಗಿರುತ್ತಾನೆ ಎಂದರೆ ಸರಿ. ಅವರೊಂದಿಗೆ ಶಾಮಿಲಾಗಿ ರಾಜಿ ಡಿಕ್ರಿಯನ್ನು ಪಡೆಯಲು ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದರಲ್ಲಿ ಈ ದಾವೆಯಲ್ಲಿ ಇರುವ 1 ಮತ್ತು 2 ನೇ ಪ್ರತಿವಾದಿಗಳು ಸದರಿ ದಾವೆಯಲ್ಲಿ ತಮ್ಮನ್ನು ಸೇರ್ಪಡೆಗೊಳಿಸಿಕೊಂಡು ನಾವು ರಾಜಿಯಾಗುವುದನ್ನು ತಡೆದಿರುತ್ತಾರೆ ಎಂದರೆ ಸುಳ್ಳು.

ಈ ದಾವೆಯಲ್ಲಿರುವ 1 ಮತ್ತು 2 ನೇ ಪ್ರತಿವಾದಿಗಳು ಸದರಿ ದಾವೆಯನ್ನು ಪ್ರತಿರೋಧಿಸಿದ್ದ ಕಾರಣ ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಮಾಲೀಕರು ಎಂದು ಹೇಳಿದ ಕಾರಣ ವಜಾಗೊಂಡಿರುತ್ತದೆ.

ಓ ಎಸ್ ನಂಬರ್ 29/2007 ರಲ್ಲಿ 1 ರಿಂದ 7 ನೇ ಪ್ರತಿವಾದಿಗಳಿಗೆ ಭಾಗ ಇದೆ ಎಂದು ಹೇಳಿ ಘೋಷಣಾತ್ಮಕ ಪರಿಹಾರವನ್ನು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ಬಂಗಾರಿ ಓಬಯ್ಯ ಮತ್ತು ಪಾಲಮ್ಮರವರಿಗೆ ಭಾಗ ಇದೆ ಎಂದು ಸದರಿ ದಾವೆ ವಜಾ ಆಗಿದೆ. ದಾಸರ ಓಬಯ್ಯನ ಸಹೋದರರು ಅವಶ್ಯ ಪಕ್ಷಗಾರರು ಎಂದು ಹೇಳಿ ಮಾನ್ಯ ಉಚ್ಚ ನ್ಯಾಯಾಲಯ 2 ನೇ ಮೇಲ್ಮನವಿಯಲ್ಲಿ ಗಮನಿಸಿದೆ ಎಂದರೆ ಸುಳ್ಳು. 2005 ರಲ್ಲಿ ಗೊತ್ತಿದ್ದರು ಸಹ ನಾವು ಓ ಎಸ್ ನಂಬರ್ 29/2007 ರಲ್ಲಿ ದಾಸರ ಓಬಯ್ಯನ ಸಹೋದರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸುಳ್ಳು. ಹೀಗಿದ್ದರು ಸಹ ಅಗತ್ಯ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸುಳ್ಳು. ಎದುರುದಾರರಿಗೆ ತೊಂದರೆ ಮಾಡುವ ಹಾಗೂ ಅವರು ರಾಜಿಗೆ ಬರಬೇಕೆಂಬ ದುರುದ್ದೇಶದಿಂದ 1996 ರಿಂದ ಅವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 163 ಬಿ ಪೂರ್ವಕ್ಕೆ ಗೌಡರ ದೊಡ್ಡಓಬಯ್ಯರ ಜಮೀನು, ಪಶ್ಚಿಮಕ್ಕೆ ಕಾಡಲ ಬೋರಯ್ಯ, ಉತ್ತರಕ್ಕೆ ಸರ್ವೆ ನಂಬರ್ 164 ಬಿ, ದಕ್ಷಿಣಕ್ಕೆ ಗೌಡರ ದೊಡ್ಡಓಬಯ್ಯ ಜಮೀನು ಇವೆ. ಸರ್ವೆ ನಂಬರ್ 163/ಬಿ ಮೊದಲು ಗಂಗಮ್ಮ, ಪಾಲಮ್ಮರವರ ಹೆಸರಿಗೆ ಇತ್ತು. ಈಗ ಬಂಗಾರಿ ಓಬಯ್ಯ, ಪಾಲಮ್ಮರವರ ಹೆಸರಿಗೆ ಮೋಸದಿಂದ ಮಾಡಿಸಿಕೊಂಡಿರುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದಿಗೂ ಗಂಗಮ್ಮ, ಪಾಲಮ್ಮರವರ ಹೆಸರಿಗೆ ಇವೆ. ದಾವಾ ಸರ್ವೆ ನಂಬರ್ 4.09 ಸೆಂಟ್ಸ ವಿಸ್ತೀರ್ಣ ಇದೆ ಅದರಲ್ಲಿ ನಾನು

ಅರ್ಧ ಭಾಗ ಉಳುಮೆ ಮಾಡುತ್ತೇನೆ. ಎದುರುದಾರರು ಇನ್ನುಳಿದ ಅರ್ಧ ಭಾಗವನ್ನು ಉಳುಮೆ ಮಾಡುತ್ತಾರೆ. ಸರ್ವೆ ನಂಬರ್ 163 ಬಿ ರಲ್ಲಿ ಕಾಡಲ ಬೋರಯ್ಯರವರ ಮಗ ಕಾಡಲ ಓಬಯ್ಯ 90 ಸೆಂಟ್ಸ ಉಳುಮೆ ಮಾಡುತ್ತಿದ್ದಾನೆ ಎಂದರೆ ಸುಳ್ಳು. ಸರ್ವೆ ನಂಬರ್ 164 ಬಿ ಒಟ್ಟು 4.63 ವಿಸ್ತೀರ್ಣ ಇದೆ ಅದರಲ್ಲಿ ನಾನು ಅರ್ಧ ಭಾಗ ಉಳುಮೆ ಮಾಡುತ್ತೇನೆ. ಎದುರುದಾರರು ಇನ್ನುಳಿದ ಅರ್ಧ ಭಾಗವನ್ನು ಉಳುಮೆ ಮಾಡುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ 1.63 ಸೆಂಟ್ಸನ್ನು ಕಾಡಲ ಬೋರಯ್ಯರವರ ಮಗ ಕಾಡಲ ಓಬಯ್ಯ ಉಳುಮೆ ಮಾಡುತ್ತಿದ್ದಾರೆ ಎಂದರೆ ಸುಳ್ಳು.

ಸರ್ವೆ ನಂಬರ್ 181 ಡಿ ಒಟ್ಟು 2.25 ವಿಸ್ತೀರ್ಣ ಇದೆ ಅದರಲ್ಲಿ ಬಂಗಾರಿ ಓಬಯ್ಯ, ಗಂಗಮ್ಮ ಮತ್ತು ಪಾಲಮ್ಮರವರು 3 ಖಣ ಮತ್ತು 3 ಮನೆಗಳನ್ನು ಕಟ್ಟುಕೊಂಡಿರುತ್ತಾರೆ. ಯಾರು ಯಾರು ಎಷ್ಟು ಜಾಗ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಸರಕಾರಿ ಶಾಲೆ ಇದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂಬರಿನಲ್ಲಿ ಜನತಾ ಮನೆ ಇದೆ. ಸಾಕ್ಷಿ ಮುಂದುವರೆದು ಸದರಿ ಜನತಾ ಮನೆಗಳು ಕಾಡಲ ಬೋರಯ್ಯನ ಆಸ್ತಿಯಾಗಿರುತ್ತವೆ. ಸದರಿ ಸರ್ವೆ ನಂಬರಿನಲ್ಲಿ ಗೂಳಿ ಬಸಪ್ಪ, ಬೋವಿ ನಾರಾಯಣ, ಕುಲಿಕುಂಟೆ ಬೋರಮ್ಮ, ಕುಲಿಕುಂಟೆ ಓಬಯ್ಯ, ಗಾದ್ರಿ ಪಾಲಯ್ಯ, ಬೋವಿ ತಿಪ್ಪಮ್ಮ, ಬೋವಿ ಗಿಡಪ್ಪ, ಗುರಪ್ಪ, ಕೆಂಗಪ್ಪ, ಮಿಸಲ ಓಬಮ್ಮ, ಸುಕ್ಕಪ್ಪ, ಕಾಟಯ್ಯ, ಬುಡ್ಡಯ್ಯ, ನಲ್ಲಂ ಬೋರಯ್ಯ, ನಲ್ಲಂ ಕರಿಯಪ್ಪ, ನಡುನಿಂಗಪ್ಪ, ಮುದಿಯಪ್ಪ, ಬಸಮ್ಮ ಗಂಡ ಡಿ ನಾಗರಾಜ, ಬೋಮ್ಮಕ್ಕ ಗಂಡ ತಿಪ್ಪೇಸ್ವಾಮಿ ಮತ್ತು ಇತರರ ಮನೆಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಕಾಡಲ ಬೋರಯ್ಯರವರ ಆಸ್ತಿಯಲ್ಲಿವೆ. ಸದರಿ ಸರ್ವೆ ನಂಬರಿನ 90 ಸೆಂಟ್ಸನಲ್ಲಿ ಜನತಾ ಮನೆ ಮತ್ತು ಸರಕಾರಿ ಶಾಲೆ ಇದೆ ಎಂದರೆ ಇಲ್ಲ. ಸದರಿ 90 ಸೆಂಟ್ಸ ಜಾಗವನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ ಎಂದರೆ ಇಲ್ಲ.

ಸರ್ವೆ ನಂಬರ್ 210 ಎ ರ 1.15 ಸೆಂಟ್ಸ ಜಮೀನಿನಲ್ಲಿ ಅರ್ಧ ಅರ್ಧ ಭಾಗದಲ್ಲಿದ್ದೇವೆ. ಅದರಲ್ಲಿ ಕಾಡಲ ಓಬಯ್ಯರವರು 55 ಸೆಂಟ್ಸ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ಸರ್ವೆ ನಂಬರ್ 212 ಡಿ ರ 60 ಸೆಂಟ್ಸನಲ್ಲಿ ನಾವು ಅರ್ಧ ಭಾಗದಲ್ಲಿದ್ದೇವೆ. ಅದರಲ್ಲಿ ಕಾಡಲ ಓಬಯ್ಯರವರು 25 ಸೆಂಟ್ಸ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ಸರ್ವೆ ನಂಬರ್ 213 ಇ ರ 53 ಸೆಂಟ್ಸನಲ್ಲಿ ನಾವು ಅರ್ಧ ಭಾಗದಲ್ಲಿದ್ದೇವೆ ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ಅರ್ಧ ಭಾಗದಲ್ಲಿದ್ದಾರೆ. ಅದರಲ್ಲಿ ಕಾಡಲ ಓಬಯ್ಯರವರು 26 ಸೆಂಟ್ಸ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ನಾಯಕರ ದೊಡ್ಡ ಬೋರಯ್ಯರವರ ಮಕ್ಕಳ ಹಾಗೂ ಮೊಮ್ಮಕ್ಕಳ

ಮದ್ಯ ಇವರೆಗೆ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸುಮಾರು ವರ್ಷಗಳ ಹಿಂದೆಯೇ ಆಗಿವೆ. ಆದ ಕಾರಣ ಎಲ್ಲರೂ ಜಂಟಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.